ಕಾಡಿಗೆ ಕಣ್ಣು

**ಕಲೀಮ್ ಉಲ್ಲಾ**



# ಗುಲಾಬಿ ರಾಜಹಂಸಗಳು ಮತ್ತು ಗಾಬರಿ ವೆಂಕಟೇಶ

> ‘ನಿಮಿಗ್ಯಾರು ಬೈದು ಬುದ್ಧಿ ಹೇಳೋ ಹಿರೀಕರು ಇಲ್ವಾ? ಇದರ ಪಟ ತಗೊಂಡೋಗಿ ಎಲ್ಲಿ ಮಾರ್ಕೊಳ್ತೀರಿ? ಟೀವಿ, ಸಿನಿಮಾದೋರಿಗೆ ಸಪ್ಲೇ ಮಾಡಿ ಕಾಸ್ ಮಾಡ್ಕೋತೀರಾ? ಒಟ್ಟಲ್ಲಿ ನಿಮ್ಮ ದಂಧೆ ಹೆಂಗಂತ ನೀವು ಬಾಯೇ ಬಿಡ್ತಿಲ್ಲವಲ್ಲ!’ ಎಂದು ಮುಗ್ಧವಾಗಿ ಪ್ರಶ್ನಿಸುತ್ತಲೇ ಇದ್ದ. ಮೂರನೇ ಕ್ಲಾಸು ಮಾತ್ರ ಓದಿರುವ ಮೀಂಗುಲಿಗ ವೆಂಕಟೇಶನಿಗೆ ನಾವು ಒಮ್ಮೊಮ್ಮೆ ಅನ್ಯಗ್ರಹ ಜೀವಿಗಳಂತೆ ಕಾಣುತ್ತಿದ್ದವೋ ಏನೋ?

ಜನರ ಓಡಾಟವೇ ಇಲ್ಲದ ತುಂಗಭದ್ರಾ ಹಿನ್ನೀರಿನಲ್ಲಿ ಇಳಿದು ಮೈ ಮುಸುಡಿಯೆಲ್ಲಾ ರಾಡಿ ರಾದ್ಧಾಂತ ಮಾಡಿಕೊಂಡಿದ್ದೆವು. ನೋಡಿದವರಿಗೆ ದೊಡ್ಡ ಜೈಲಿನಿಂದ ತಪ್ಪಿಸಿಕೊಂಡು ಬಂದ ರೌಡಿಕೈದಿಗಳ ಅವಸ್ಥೆಯಲ್ಲಿ ಕಾಣುತ್ತಿದ್ದೆವು. ನಮ್ಮ ಕೈಲಿದ್ದ ಭಾರಿ ಕ್ಯಾಮೆರಾಗಳಿಗೂ ನಮಗೂ ಲವಲೇಶದ ಸಂಬಂಧವೂ ಅಲ್ಲಿ ಕಾಣುತ್ತಿರಲಿಲ್ಲ. ಕಾದೂ ಕಾದೂ ಸುಸ್ತಾಗಿ, ಕೊನೆಗೆ ಯಾರೂ ಸಿಗಲಿಲ್ಲ ಎಂದು ಒಬ್ಬ ಮೀನು ಹಿಡಿಯುವ ದೋಣಿಗಾರನನ್ನು ನ್ಯಾಚುರಲಿಸ್ಟ್ ರಾಜು ನಮ್ಮ ಸಹಾಯಕ್ಕೆ ಹಿಡಿದು ತಂದಿದ್ದ. ಬೆದರುಗಣ್ಣಿನ ಅವನಿಗೆ ‘ಅಗೋ ಆ ದೂರದಲ್ಲಿ ನೀರಿನ ಮೇಲೆ ನಡೆದಾಡ್ತಾ ಇದಾವಲ್ಲ, ಆ ಬಣ್ಣದ ಕೊಕ್ಕರೆಗಳ ಚಿತ್ರ ತೆಗೀಬೇಕು, ದೋಣೀಲಿ ಅಲ್ಲೀಗಂಟ ಬೇಗ ಕರ್ಕೊಂಡು ಹೋಗ್ತೀಯಾ?’ ಎಂದು ಕೇಳಿದೆವು. ದಡಕ್ಕೆ ಬಂದಾಗ ಸಾಮಾನ್ಯವಾಗಿ ಮೀನು ಕೇಳುವ ಜನರ ಕಂಡಿದ್ದ ಅವನಿಗೆ ನಮ್ಮ ಈ ಮಾತು ತೀರಾ ವಿಚಿತ್ರವಾಗಿ ಕಂಡಿತು.

ಪಟ ತೆಗೆಯುವ ನಮ್ಮ ಮಾದರಿಯ ಹುಚ್ಚರ ಗುಂಪನ್ನು ಅವನು ಈ ಜನ್ಮದಲ್ಲಿ ಕಂಡೇ ಇರಲಿಲ್ಲವೇನೋ? ಗಾಬರಿಗೆ ಬಿದ್ದವನಂತೆ ವರ್ತಿಸಿದ ಆತ ನಮ್ಮಿಂದ ಹೇಗಾದರೂ ತಪ್ಪಿಸಿಕೊಳ್ಳುವ ಪ್ಲಾನು ಯೋಚಿಸಿ, ‘ಓಹೋ ಕಮ್ಮಿಯೆಲ್ಲಾ ಆಗಲ್ಲ ಬಿಡಿ, ಬರೋಬ್ಬರಿ ಎಲ್ಡು ಸಾವ್ರ ಆಗುತ್ತೆ’ ಎಂದು ತಗಾದೆ ತೆಗೆದ. ಜಾಸ್ತಿ ರೊಕ್ಕ ಕೇಳಿದರೆ ಇವರು ನನ್ನ ತಂಟೆಗೆ ಬರದೆ ಬಿಟ್ಟು ಹೋಗುತ್ತಾರೆ ಎಂಬ ಆಲೋಚನೆ ಅವನಿಗಿತ್ತು. ತೀರಾ ಜಗಭಂಡರಾದ ನಾವು, ‘ಇನ್ನೂ ಐನೂರು ಜಾಸ್ತಿ ಸೇರಿಸಿ ಕೊಡ್ತೀವಿ, ನಡಿ’ ಎಂದಾಗ ಅವನು ಪೇಚಿಗೆ ಸಿಲುಕಿ ಪಿಳಿಪಿಳಿ ಕಣ್ಣು ಕುಣಿಸಿದ. ಅರೆ ಮನಸ್ಸಲ್ಲೇ ಮಗುಚಿಟ್ಟ ನೀಲಿ ದೋಣಿಯ ತೆಗೆದು ನೀರಿಗಿಳಿಸಿದ.

ನಮಗೆ ಸುಮಾರು ವರ್ಷಗಳಿಂದ ಗುಲಾಬಿ ಬಣ್ಣದ ರಾಜಹಂಸಗಳ ಚಿತ್ರ ತೆಗೆಯುವ ಇರಾದೆ ಇತ್ತಾದರೂ ಅವಕಾಶ ಸಿಕ್ಕಿರಲಿಲ್ಲ. ಕರ್ನಾಟಕದ ಅನೇಕ ಹಿನ್ನೀರು ತಾಣಗಳಿಗೆ ಇವು ಆಹಾರ ಹುಡುಕಿಕೊಂಡು ಉತ್ತರ ಭಾರತದಿಂದ ಬರುವುದು ಗೊತ್ತಿತ್ತು. ಬೇಸಿಗೆಯಲ್ಲಿ ನೀರು ಕಡಿಮೆಯಾದಾಗ ಮೀನುಶಿಕಾರಿ ಭರ್ಜರಿಯಾಗಿ ನಡೆಯುತ್ತದೆ. ನಮ್ಮ ಸೊಂಟದ ಮಟ್ಟಕ್ಕೆ ಬರುವಷ್ಟು ನೀರಿರುವ ಜಾಗೆಯಲ್ಲಿ ತಮ್ಮ ನೀಳ ಕಾಲುಗಳ ಇಳಿಸಿ ಇವು ಗುಂಪುಬೇಟೆಯಲ್ಲಿ ತೊಡಗುತ್ತವೆ. ಬೆಳಗ್ಗೆ ಮತ್ತು ಸಂಜೆಯ ಸಮಯದಲ್ಲಿ ಇವುಗಳ ಚಿತ್ರ ತೆಗೆಯುವುದು ಸೂಕ್ತ.